# ಗೋ ವಿಶ್ವ

Cow Universe

गौ विश्व

ವಿರೋಧಿ ಸಂವತ್ಸರ ಆಷಾಢ ಜೂನ್ ೨೦೦೯ ಸಂಪುಟ-೩ ಸಂಚಿಕೆ-೬


**ಗುರುವಾಣಿ**

## ಗೋ ಗ್ರಾಮ ಯಾತ್ರೆಯ ಪೂರ್ವರಂಗದಲ್ಲಿ ಚಾತುರ್ಮಾಸ್ಯ



ಚಾತುರ್ಮಾಸ್ಯ, ಪ್ರತಿ ಸಂವತ್ಸರದಲ್ಲೊಂದು ಆವರ್ತನ. ಆಷಾಢ ಶುದ್ಧ ಪೂರ್ಣಿಮೆಯಂದು ಪ್ರಾರಂಭ. ಸಮಸ್ತ ಕುಲಕೋಟಿಗೂ ಗುರುವಿನ ಸ್ಥಾನದಲ್ಲಿರುವ ವ್ಯಾಸ ಮಹರ್ಷಿಗಳನ್ನು ಸ್ಮರಿಸಿ, ಪೂಜಿಸುವುದು ಅಂದಿನ ವಿಶೇಷ.

ಆಗ ಕೈಗೊಂಡ ಚಾತುರ್ಮಾಸ್ಯ ವ್ರತ ನಾಲ್ಕು ಪಕ್ಷಗಳ ಕಾಲ, ಅಂದರೆ ಎರಡು ಮಾಸಗಳ ಪರ್ಯಂತ ಕಂಕಣ ಬದ್ಧವಾಗಿರುತ್ತದೆ.

ಈ ಎರಡು ಮಾಸಗಳಲ್ಲಿ ಭೋರ್ಗರೆಯುವ ಮಳೆಗಾಲ. ಚೈತ್ರ ಮಾಸದಲ್ಲಿ ಪಲ್ಲವಿಸಿದ ಹಸಿರು, ಪ್ರಕೃತಿ ಮಾತೆ ಕರುಣಿಸಿದ ನೀರ ಉಸಿರಿನಿಂದ ಹಚ್ಚ-ಹಸಿರಾಗಿ ರೂಪುಗೊಳ್ಳುವ ಕಾಲ ಇದಾಗಿದೆ. ಅಲ್ಲದೇ, ಜೀವ-ಜಂತುಗಳು ತೀವ್ರತರದಲ್ಲಿ ಸಕ್ರಿಯವಾಗಿರುವ ಕಾಲವೂ ಇದೇ ಆಗಿದೆ. ಹಾಗಾಗಿ ಈ ಕಾಲಗಳಲ್ಲಿ ಸಂಚಾರ ನಿಷಿದ್ಧ.

ಆದ್ದರಿಂದ ಚಾತುರ್ಮಾಸ್ಯ ವ್ರತಧಾರಿಗಳು ಒಂದೇ ಕಡೆ ನೆಲೆನಿಂತು ಸ್ವಾಧ್ಯಾಯದಲ್ಲಿ ನಿರತರಾಗಬೇಕೆಂದು ದರ್ಶನ ಹೇಳುತ್ತದೆ.

ಈ ಅವಧಿ ನಮ್ಮ ವಿಶ್ವ ಮಂಗಲ ಗೋ ಗ್ರಾಮ ಯಾತ್ರೆಯ ಪೂರ್ವರಂಗದಲ್ಲಿದೆ. ಈ ಯಾತ್ರೆ ಸಮಸ್ತ ಭೂಮಂಡಲದ ಮಂಗಲವನ್ನು ಆಶಿಸಿ ಹೊರಟಿದ್ದು, ಅದರ ಸ್ವರೂಪ ಚಿಂತನೆಯನ್ನು ನರ-ನಾಡಿಗಳಲ್ಲಿ ಇಳಿಸಿಕೊಳ್ಳಲು ಇದು ಸಕಾಲವಾಗಿದೆ.

ಜೀವ ಪ್ರಕೃತಿ ಅಂತೆಯೇ ಅನುವಾಗಲಿ. ಸೃಷ್ಟಿ ದಾರಿಯನ್ನು ಬಿಟ್ಟುಕೊಡಲಿ ಎಂದು ಕರ ಜೋಡಿಸಿ ಪ್ರಾರ್ಥಿಸೋಣ.

ಎಲ್ಲರಿಗೂ ಒಳ್ಳೆಯದಾಗಲಿ...

॥ ವಂದೇ ಗೋ ಮಾತರಮ್ ॥


ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ


### ಹೂರಣ


ಗುರುವಾಣಿ

ಬದುಕನ್ನು ಹಸನಾಗಿಸುವಲ್ಲಿ ಪ್ರತಿಯೊಬ್ಬರ ಪಾತ್ರ

ಪ್ರಶ್ನೋತ್ತರ

ಮಾಸದ ಗೋವು: ಬರಗೂರು

ಗೋವು-ಕಾನೂನು-ನಮಗೆಷ್ಟು ಗೊತ್ತು?

ಹೀಗೊಂದು ಹಾಲಿನ ಸ್ವಗತ



ಪ್ರಕಾಶನ: IT4COW ಸಂಘಟನೆ

groups.yahoo.com/group/IT4COW

ಅಂತರಜಾಲ ತಾಣ: vishwagou.org

ಸಂಪರ್ಕ: govishva@gmail.com




**ಭಾರತದಲ್ಲಿ ಮೊದಲ ಕಸಾಯಿಖಾನೆ ಕಲ್ಕತ್ತಾದಲ್ಲಿ ೧೭೬೦ರಲ್ಲಿ ಆರಂಭವಾಯಿತು.**

**ಮೊದಲ ಸ್ವಾತಂತ್ರ್ಯ ಸಮರ ೧೮೫೭ರಲ್ಲಿ ಗೋವಿನ ಹಿನ್ನೆಲೆಯಿಂದಲೇ ಆರಂಭವಾಯಿತು.**

ವಿಶ್ವ ಮಂಗಲ ಗೋ ಗ್ರಾಮ ಯಾತ್ರೆ

# ಬದುಕನ್ನು ಹಸನಾಗಿಸುವಲ್ಲಿ ಪ್ರತಿಯೊಬ್ಬರ ಪಾತ್ರ

ಎಲ್ಲರ ಬದುಕನ್ನು ಹಸನಾಗಿಸುವುದೇ ಈ ಯಾತ್ರೆಯ ಉದ್ದೇಶ. ಅದು ನಾವಿರಬಹುದು, ಗೋವಿರಬಹುದು ಅಥವಾ ಇನ್ನು ಏನೇ ಇರಬಹುದು, ಎಲ್ಲವನ್ನೂ ತನ್ನದಾಗಿಸಿಕೊಳ್ಳುವ ಅತ್ಯಾಸೆಯಿಂದ ಒಂದು ಮತ್ತೊಂದರ ಅನ್ನ ಕಸಿಯುವ, ಜೀವ ಹಿಂಡುವ ವಿಕೃತಿಗೆ ಆಸ್ಪದ ಕೊಡಬಾರದು ಎಂಬ ಸಂದೇಶವನ್ನು ಹೊತ್ತು ಈ ಯಾತ್ರೆ ಮುನ್ನಡೆಯಲಿದೆ. ಆದ್ದರಿಂದ ಪ್ರತಿಯೊಬ್ಬರೂ ಈ ಮಂಗಳ ಸಂದೇಶವನ್ನು ತಮ್ಮ ದನಿಯಲ್ಲಿ ಮೊಳಗಿಸಿ, ಆಗಬೇಕಾದ ಕಾರ್ಯಕ್ಕೆ ಕೈ ಹಚ್ಚಬೇಕಾದ ಜವಾಬ್ದಾರಿ ಇದೆ.




ಬದುಕು ಹಸನಾಗಿಸುವ ಈ ಪ್ರಕ್ರಿಯೆಗೆ ಯಾತ್ರೆ ಆರಂಭ ಮಂಗಳ ಅಷ್ಟೇ. ಬದುಕು ನಿಜವಾಗಿಯೂ ಹಸನಾಗಬೇಕಾದರೆ ನಿತ್ಯದ ಕಾಯಕವನ್ನು ಯಾತ್ರೆಯಲ್ಲಿ ಮುಂದಿಟ್ಟ ಆಶಯದಂತೆ ರೂಪಿಸಿಕೊಳ್ಳಬೇಕು.

**ಪ್ರತಿಯೊಂದರ ಸ್ವರೂಪವೂ ಅನನ್ಯವಾಗಿರುವಂತೆ ಪಾತ್ರ ನಿರ್ವಹಣೆಯೂ ವಿಭಿನ್ನವಾಗಿರುತ್ತದೆ.**

ಕಾರ್ಯಕ್ಕೆ ಎತ್ತನ್ನು ಬಳಸುವುದು, ಹಟ್ಟಿ ಗೊಬ್ಬರವನ್ನು ಬಳಸುವುದು, ಗೋಮೂತ್ರಾದಿಗಳ ಕೀಟನಾಶಕ ಸಿಂಪಡಿಸುವುದನ್ನು ರೂಢಿಸಿಕೊಳ್ಳಬಹುದು. ಗೋವನ್ನು ಕೇವಲ ಹಾಲಿನ ಯಂತ್ರವಾಗಿ ನೋಡದೇ, ಗೋವಿನಿಂದ ಆಜೀವಪರ್ಯಂತ ಲಭಿಸುವ ಗೋಮೂತ್ರ, ಗೋಮಯಗಳ ಉತ್ಕೃಷ್ಟತೆಯ ಬಗೆಗೂ ಅರಿತು, ಅವುಗಳ ಪ್ರಯೋಜನ ಪಡೆದುಕೊಳ್ಳಬಹುದು.

**ಉದ್ಯಮಿ:** ಒಂದೇ ಉದಾಹರಣೆ –ಗೋಮೂತ್ರ ಅರ್ಕ ಕಡೆಯ ಹಂತದ ಕ್ಯಾನ್ಸರನ್ನೂ ನಿವಾರಿಸುತ್ತದೆ. ಇಂತಹುದೇ ಅನೇಕ ವಿಶಿಷ್ಟ ಗುಣಗಳು ಬಗೆಬಗೆಯ ಗವ್ಯೋತ್ಪನ್ನಗಳಿಗಿವೆ. ಈ ಉದ್ಯಮ ಕ್ಷೇತ್ರ ನಮ್ಮ ಸಮಾಜಕ್ಕಿನ್ನೂ ಹೊಸದು. ಆದ್ದರಿಂದ ಉದ್ಯಮಿಗಳು ನಿಧಾನವಾಗಿ ಮುಂದೆಬರುತ್ತಿದ್ದಾರೆ. ಸ್ವಲ್ಪ ರಿಸ್ಕ್ ತೆಗೆದುಕೊಂಡಾದರೂ ಸೈ ಗವ್ಯೋತ್ಪನ್ನಗಳ ಸರಣಿಯನ್ನು ಮಾರುಕಟ್ಟೆಯಲ್ಲಿ ನಿಲ್ಲಿಸಬೇಕು. ನಂತರ ಆಗುವ ಲಾಭ, ಉದ್ಯಮಿ–ಗ್ರಾಹಕರಿಬ್ಬರ ನಿರೀಕ್ಷೆಗೂ ಮೀರಿದ್ದು.

**ಗವ್ಯೋದ್ಯಮ ಸಾಧ್ಯತೆ –** ದೇಶೀ ಆಕಳ ಹಾಲು, ಮೊಸರು, ಬೆಣ್ಣೆ, ತುಪ್ಪ; ಬಗೆಬಗೆಯ ತಿಂಡಿ–ತಿನಿಸು; ಕ್ಯಾನ್ಸರ್, ರಕ್ತದೊತ್ತಡ, ಸಕ್ಕರೆ ಕಾಯಿಲೆ, ಹೃದಯ ರೋಗ, ನರರೋಗ, ಮಾನಸಿಕ ರೋಗ, ಚರ್ಮರೋಗ, ಕಣ್ಣು–ಕಿವಿ–ಮೂಗಿನ ತೊಂದರೆ, ಜ್ವರ, ನೋವು ನಿವಾರಣೆ, ತಲೆನೋವು, ಶೀತ–ನೆಗಡಿ, ಕೂದಲು ಉದುರುವ ಸಮಸ್ಯೆಗಳಿಗೆ ಗವ್ಯೋತ್ಪನ್ನ ಸಿದ್ಧ ಔಷಧ; ಸಾಬೂನು, ಶ್ಯಾಂಪೂ, ಸೌಂದರ್ಯ ವರ್ಧಕಗಳ ತಯಾರಿಯಲ್ಲಿ ಗವ್ಯೋತ್ಪನ್ನವಿದ್ದರೆ ಅದರ ಮಾತೇ ಬೇರೆ; ವ್ಯವಸಾಯಕ್ಕೆ ಬೇಕಾದ ಗೊಬ್ಬರ, ಕೀಟನಾಶಕ, ಕಳೆನಾಶಕವಾಗಿಯೂ ಸೈ; ಅಡಿಗೆ ಅನಿಲ, ವಿದ್ಯುತ್ ಉತ್ಪಾದನೆ ಎಲ್ಲವೂ ಸಾಧ್ಯ.

ಒಂದಂಶವನ್ನು ನೆನಪಿಡಲೇಬೇಕು. ಉದ್ಯಮಿ ಅಷ್ಟೂ ಲಾಭವನ್ನು ಕೊಳ್ಳೆಹೊಡೆಯುವ ಯೋಚನೆ ಎಂದೆಂದಿಗೂ ಮಾಡಬಾರದು. ಲಾಭದಲ್ಲಿ ಎಲ್ಲರೂ ತಂತಮ್ಮ ಪಾಲನ್ನು ಪಡೆಯುವ ನೀತಿ ಎಲ್ಲರಿಗೂ ಕ್ಷೇಮ.

**ಕಾರ್ಮಿಕ, ವಿಜ್ಞಾನಿ, ಪತ್ರಕರ್ತ, ಕಲಾವಿದ, ಶ್ರೀಸಾಮಾನ್ಯ:** ನಿಜವಾದ ಮೌಲ್ಯ ಸಾಧನೆಯಲ್ಲಿ ತಂತಮ್ಮ ಪಾಲ್ಗೊಳ್ಳುವಿಕೆ ಎಂತಿರಬೇಕು? ಚಿಂತಿನೆ ನಡೆಸಿ, ಬಿಚ್ಚಿಕೊಂಡ ದಾರಿಯಲ್ಲಿ ನಡೆಯಬಹುದು. ಈ ನಡೆ ಉಳಿದೆಲ್ಲರಿಗೂ ಸ್ಫೂರ್ತಿಯಾಗುವುದರಲ್ಲಿ ಅನುಮಾನವಿಲ್ಲ.

# ಪ್ರಶ್ನೋತ್ತರ

ಪ್ರ: ಗೋಮಾಂಸ ಉದ್ಯಮದಿಂದ ಜಲ ಮಾಲಿನ್ಯ, ಜಲ ವ್ಯರ್ಥವಾಗುತ್ತದೆಯೇ ?

ಉ: ಅಮೆರಿಕದಲ್ಲಿ ಆಗುವ ಜಲಮಾಲಿನ್ಯದಲ್ಲಿ ಶೇ.೫೦ ರಷ್ಟು ಗೋಮಾಂಸ ಉದ್ಯಮದಿಂದ ಉಂಟಾಗುತ್ತಿದೆ. ಮೇವು, ಧಾನ್ಯ, ಕೃಷಿಗೆ ಬಳಸಲಾಗುವ ರಾಸಾಯನಿಕ ಗೊಬ್ಬರ, ಕೀಟನಾಶಕಗಳು ಜಲಮಾಲಿನ್ಯ ಉಂಟು ಮಾಡುತ್ತಿವೆ. ಇದಲ್ಲದೆ ಲಕ್ಷಾಂತರ ದನಗಳನ್ನು ಒಟ್ಟಿಗೆ ಸಾಕುವುದರಿಂದ ಸಗಣಿ, ಗಂಜಲದ ಮೂಲಕ ಉಂಟಾಗುವ ಜಲಮಾಲಿನ್ಯ. ಅಮೆರಿಕದಲ್ಲಿ ಪ್ರತಿ ವರ್ಷ ಬಳಕೆಯಾಗುವ ನೀರಿನಲ್ಲಿ ಶೇ. ೫೦ ಪಾಲು ಗೋಮಾಂಸ ಉದ್ಯಮಕ್ಕಾಗಿ ಆಗುತ್ತದೆ. ಒಬ್ಬ ಗೋಮಾಂಸ ಭಕ್ಷಕನಿಗೆ ದಿನಕ್ಕೆ ೪೨೦೦ ಗ್ಯಾಲನ್ ನೀರು ಬೇಕು. ಆದರೆ ಒಬ್ಬ ಸಸ್ಯಾಹಾರಿಗೆ ದಿನಕ್ಕೆ ೧೨೦೦ ಗ್ಯಾಲನ್ ನೀರು ಸಾಕು. ಒಂದು ಪೌಂಡು ಗೋಧಿ ಬೆಳೆಯಲು ೨೫ ಗ್ಯಾಲನ್ ನೀರು ಸಾಕು. ಒಂದು ಪೌಂಡು ಗೋಮಾಂಸ ಉತ್ಪಾದನೆಗೆ ೨, ೫೦೦ ಗ್ಯಾಲನ್ ನೀರು ಬೇಕು.

ಪ್ರ: ಹಸುಗಳನ್ನು ಕೊಲ್ಲುವುದು ಹಾಗೂ ಮಾಂಸ ಮಾರಾಟ ಮಾಡುವುದು ದೇಶದ ದೃಷ್ಟಿಯಿಂದ ಲಾಭದಾಯಕವೇ ?

ಉ: ಹಸುಗಳು ಕೇವಲ ಹಾಲುಕೊಡುವ ಯಂತ್ರಗಳು ಎಂದು ಭಾವಿಸುವ ಪಶ್ಚಿಮದ ಅಭಿಪ್ರಾಯ. ಭಾರತದ ಸಂದರ್ಭದಲ್ಲಿ ಇದು ಶುದ್ಧ ಅವಿವೇಕ. ಅವು ಜೀವಮಾನವಿಡೀ ನೀಡುವ ಗೋಮಯ ಹಾಗೂ ಗೋಮೂತ್ರದ ಮೌಲ್ಯವನ್ನು ಅರಿತಾಗ ಈ ಅವಿವೇಕ ನಿವಾರಣೆಯಾಗುತ್ತದೆ. ಒಂದು ಹಸುವನ್ನು ಕೊಂದರೆ ಮಾಂಸ, ರಕ್ತ, ಮೂಳೆ, ಚರ್ಮ ಇವುಗಳ ಮೂಲಕ ದೊರೆಯುವ ಆದಾಯ ಸುಮಾರು ೧೦ ಸಾವಿರ ರೂ.ಗಳು. ಆದರೆ ಅದನ್ನು ಸಾಕಿದರೆ ಸಗಣಿ, ಗಂಜಲಗಳ ಮೂಲಕ ಅದರ ಜೀವಮಾನದಲ್ಲಿ (೨೦ ವರ್ಷ) ದೊರೆಯುವ ಆದಾಯ ಸುಮಾರು ೪೦ ಲಕ್ಷ ರೂ.ಗಳು. ಈಗ ನೀವೇ ಹೇಳಿ. ಯಾವುದು ಲಾಭಕರ? ಕೊಲ್ಲುವುದೋ? ಸಾಕುವುದೋ? ಸಾಕುವುದು ಎಂದು ಸುಪ್ರೀಂ ಕೋರ್ಟ್ ತೀರ್ಮಾನಿಸಿತು.

– **ಪ್ರೊ. ಬಿ. ಎಂ. ಕುಮಾರಸ್ವಾಮಿ** (ಕೃಪೆ: ವಿಜಯ ಕರ್ನಾಟಕ) (ಸಂಗ್ರಹ: ಉಲ್ಲಾಸ್ ಸಿ. ಕೆ)

ಮಾಸದ ಗೋವು

# ಬರಗೂರು

ಬರಗೂರು ತಳಿಯ ಕುರಿತಾಗಿ ಈ ಬಾರಿಯ ಮಾಸದ ಗೋವು ಅಂಕಣ. ಹೆಚ್ಚಿನ ಭಾರತೀಯ ತಳಿಗಳಂತೆ ಬರ್ಗೂರ್ ಅಥವಾ ಬರಗೂರು ತಳಿ ತನ್ನ ಹೆಸರನ್ನು ತನ್ನ ತವರಿನಿಂದಲೇ ಪಡೆದಿದೆ. ಬರಗೂರು ತಳಿಯ ತವರು ತಮಿಳುನಾಡಿನ ಈರೋಡ್ ಜಿಲ್ಲೆಯ ಭವಾನಿ ತಾಲೂಕಿನ ಬರಗೂರು ಬೆಟ್ಟಪ್ರದೇಶ. ಇಲ್ಲಿನ ಲಿಂಗಾಯ್ ಮತ್ತು ಲಾಂಬಾಡಿ ಜನಾಂಗದವರು ಇದನ್ನು ಬಹುಹಿಂದಿನಿಂದಲೂ ರಕ್ಷಿಸಿಕೊಂಡು ಬಂದವರು. ಶುದ್ಧ ಕೆಲಸಗಾರ ತಳಿ ಬರಗೂರು.




ಬರಗೂರು, ತಮಿಳುನಾಡು

ಬರಗೂರು ತಳಿಯ ಹೋರಿಗಳು ಸ್ವಲ್ಪ ಹೆಚ್ಚೆ ರೌದ್ರ ಸ್ವಭಾವದವು. ಇವುಗಳನ್ನು ಪಳಗಿಸಿವುದಕ್ಕೆ ತುಂಬಾ ತಾಳ್ಮೆ ಬೇಕು. ಒಮ್ಮೆ ಪಳಗಿದರೆ ಇವುಗಳ ಕಾರ್ಯವೈಖರಿ ಅಪೂರ್ವ ಎನ್ನುವುದು ರೈತರ ಅಂಬೋಣ. ಬೆಟ್ಟಗುಡ್ಡಗಳ ಏರು ಇಳಕಲಿನ ಭೂಮಿಗಳಲ್ಲಿ ಶ್ರಮವಿಲ್ಲದೆ ಟನ್‌ಗಟ್ಟಲೆ ಭಾರ ಎಳೆಯುವ ಸಾಮರ್ಥ್ಯ ಇವುಗಳ ವಿಶೇಷ. ಬರಗೂರು ತಳಿಗಳು ಆಕಾರದಲ್ಲಿ ಮೈಸೂರಿನ ಇತರ ತಳಿಗಳಂತೆಯೆ ಆದರೆ ಸ್ವಲ್ಪ ಕುಳ್ಳ ಅಷ್ಟೆ.


**ಮೂಲ : ಬರಗೂರು ಗುಡ್ಡಗಾಡು ಪ್ರದೇಶ – ತಮಿಳುನಾಡು**
**ವಿಭಾಗ : ಕೆಲಸಗಾರ ತಳಿ**
**ಸಾಧಾರಣ ಎತ್ತರದ ಉತ್ತಮ ಕೆಲಸಗಾರ ತಳಿ. ವೇಗ ಮತ್ತು ಹೊರ ಹೊರಲು ಅತ್ಯುತ್ತಮ ಹೋರಿಗಳಿವು.**
**ಬಣ್ಣ : ಕಂದು ಮತ್ತು ಬಿಳಿ ಬಣ್ಣ. ಬಿಳಿ ಹಾಗೂ ಕಡು ಕಂದು ಬಣ್ಣದವುಗಳೂ ಕಾಣಬಹುದು.**
**ಮುಖ : ಕೊಂಬಿನ ಮಧ್ಯದಲ್ಲಿ ಹೊಂಡವಿರುತ್ತದೆ.**
**ಕೊಂಬು : ಕಂದು ಬಣ್ಣ, ಉದ್ದವಾಗಿದ್ದು, ಬುಡದಲ್ಲಿ ಹತ್ತಿರವಿರುತ್ತದೆ.**
**ಕಾಲುಗಳು : ಸಪೂರವಾಗಿರುತ್ತವೆ.**

ಬರಗೂರು ತಳಿಯನ್ನು ಬರಗೂರು ಪ್ರದೇಶಗಳಲ್ಲಿ ಸಾಕುವ ಕ್ರಮವೇ ವಿಶೇಷವಾದದ್ದು. ಇವುಗಳನ್ನು ಇಲ್ಲಿ ಪಾಟ್ಟೀಗಳು ಎಂದು ಕರೆಯಲ್ಪಡುವ ಮಂದೆಗಳಲ್ಲಿ ದಟ್ಟ ಅರಣ್ಯಪ್ರದೇಶಗಳಲ್ಲಿ ಸಾಕುತ್ತಾರೆ. ಈ ಮಂದೆಯ ಪಾಲಕರು ಸಾಮಾನ್ಯವಾಗಿ ಲಿಂಗಾಯ್ ಜನಾಂಗದವರು. ಪ್ರತೀ ಪಾಟ್ಟೀಗಳು ಐವತ್ತಿರಿಂದ ಇನ್ನೂರರವರೆಗೂ ಹಸುಗಳನ್ನು ಹೊಂದಿರುತ್ತದೆ. ವರ್ಷದಲ್ಲಿ ಬಹುಕಾಲ ಅರಣ್ಯ ಅಥವಾ ಹುಲ್ಲುಗಾವಲುಗಳಲ್ಲಿ ಕಾಲ ಹಾಕುವ ಈ ಮಂದೆಗಳನ್ನು ಗೋಪಾಲಕರು ಸುಗ್ಗಿ ಕಾಲದಲ್ಲಿ ಮಾತ್ರ ಹಳ್ಳಿಗೆ ಕರೆತರುತ್ತಾರೆ. ಸುಗ್ಗಿಯಲ್ಲಿ ಇವುಗಳದ್ದು 'ಕತ್ತೆದುಡಿತ'!. ಸುಗ್ಗಿಯಾದ ನಂತರ ಜನವರಿಯವರೆಗೂ ಬರಗೂರು ಪ್ರದೇಶದಿಂದ 40 ಕಿಮಿ ದೂರವಿರುವ ಉಪ್ಪಿನಗಣಿಯಲ್ಲಿ ಇವುಗಳ ವಾಸ. ಅದಾದ ನಂತರ ಮತ್ತೆ ದಟ್ಟ ಅರಣ್ಯದೊಳಗಡೆ ಇವುಗಳನ್ನು ಕರೆದೊಯ್ಯಲಾಗುತ್ತದೆ. ಈ ಕ್ರಮ ದಶಕಗಳಿಂದ ಅನೂಚಾನವಾಗಿ ನಡೆದುಬಂದಿದೆ.

(6ನೆ ಪುಟ ನೋಡಿ)



ಬರಗೂರು



ನಿಮಾರಿ

# ಗೋವು-ಕಾನೂನು-ನಮಗೆಷ್ಟು ಗೊತ್ತು?

ಇಂದಿನ ಈ ಯಾಂತ್ರೀಕೃತ ಯುಗದಲ್ಲಿ ಗೋವು ಏನು? ಯಾಕೆ? ನಮ್ಮ ಸಂವಿಧಾನ, ಕಾನೂನು ಏನು ಹೇಳುತ್ತದೆ? ನಮ್ಮ ದೇಶದಲ್ಲಿ ಅಥವಾ ಬೇರೆ ದೇಶಗಳಲ್ಲೂ ಗೋವಿನ ಕುರಿತು ಕಾನೂನು ಇತ್ತೇ? ಇದೆಯೇ? ಇತ್ಯಾದಿ ಅವಶ್ಯಕ ಪ್ರಶ್ನೆಗಳಿಗೆ ಇಂದು ಅನೇಕರಿಗೆ ಉತ್ತರ ಗೊತ್ತಿರಲಾರದು. ಈ ಕುರಿತು ನಮ್ಮ/ವಿದೇಶಗಳ ಇತಿಹಾಸದಲ್ಲಿ, ಸಂವಿಧಾನದಲ್ಲಿ ಉಲ್ಲೇಖವಾದ ಮತ್ತು ಸರ್ವೋಚ್ಚ ನ್ಯಾಯಾಲಯದ ತೀರ್ಪುಗಳಲ್ಲಿ ಹೇಳಿದ ಗೋವಿನ ವಿಷಯಗಳ ಕುರಿತು ಇಲ್ಲಿ ಬೆಳಕು ಚೆಲ್ಲುವ ಕಿರು ಪ್ರಯತ್ನ ಮಾಡಿದೆ. ಇದರಿಂದ ಗೋ ಸಂವರ್ಧನೆಯ ಮಹಾ ಅಭಿಯಾನಕ್ಕೆ ಉಪಯೋಗವಾದಲ್ಲಿ ಸಾರ್ಥಕವಾಗುತ್ತದೆ.

**ವಿದೇಶಗಳಲ್ಲಿ:**

1 ಬಾಲಿ ದ್ವೀಪದಲ್ಲಿ ಗೋಮಾಂಸ ಭಕ್ಷಣೆ ಮಾಡುವವನನ್ನು ನಾಯಿಗಿಂತ ಕೀಳಾಗಿ ನೋಡುತ್ತಿದ್ದರು.

2 ನೂಪಾನಿಸದಾ (ಇಂಡೋನೇಷ್ಯಾ) ದ್ವೀಪದಲ್ಲಿ ಗೋಮಾಂಸ ಭಕ್ಷಣೆ ಮಾಡಿದ ವ್ಯಕ್ತಿಗೆ ಊರಿನಿಂದಲೇ ಬಹಿಷ್ಕಾರ ಹಾಕುವ ಕಠಿಣ ಶಿಕ್ಷೆ ನೀಡಲಾಗುತ್ತಿತ್ತು.

3 ಜಗತ್ತಿನ ಅತ್ಯಂತ ಹಳೆಯ ಸಂಸ್ಕೃತಿ ಮತ್ತು ಜನಾಂಗಗಳನ್ನು ಹೊಂದಿರುವ ಸುಮೇರಿ ಹಾಗೂ ಬೆಬಿಲೋನಾಗಳಲ್ಲಿ ಗೋಹತ್ಯಾ ನಿಷೇಧ ಕಾನೂನು ಜಾರಿಯಲ್ಲಿತ್ತು.

4 ನಮ್ಮ ಪಕ್ಕದ ಬರ್ಮಾ ದೇಶದಲ್ಲಿ ಗೋ ಹಂತಕರಿಗೆ ಗಲ್ಲಿಗೇರಿಸುವ ಶಿಕ್ಷೆ ಜಾರಿಯಲ್ಲಿತ್ತು.

5 ಅಫ್ಘಾನಿಸ್ತಾನದ ಶಾಸನಾಧಿಕಾರಿಗಳಾದ ನೂರಹತ್ತನೆಯ ಅಹಲ್ ಸುನ್ನತ್‌ನ ಫತ್ವಾ ಪ್ರಕಾರ (ಧಾರ್ಮಿಕ ಆಜ್ಞೆ) ಗೋವಧೆ ನಿಷೇಧಿಸಲಾಗಿತ್ತು.

6 ಇರಾನ್‌ನಲ್ಲಿ ಕೂಡ ಗೋಹತ್ಯಾ ನಿಷೇಧ ಕಾನೂನು ಜಾರಿಯಲ್ಲಿತ್ತು.

**ಭಾರತದಲ್ಲಿ:**

ಮಹಾನ್ ತಾಜಮಹಲ್ ನಿರ್ಮಾತೃ ಜಹಾಂಗೀರನ ಕಾಲದಲ್ಲಿ ಗೋಹತ್ಯೆ ಮಾಡುವವರಿಗೆ ಕಠಿಣ ಶಿಕ್ಷೆ ನೀಡುತ್ತಿದ್ದುದಲ್ಲದೇ ಗೋವಧೆ ಸಂಪೂರ್ಣವಾಗಿ ನಿಷೇಧವಾಗಿತ್ತು ಎನ್ನುವುದನ್ನು ಬರ್ನಿಯರ್ ಎನ್ನುವ ವಿದೇಶಿ ಯಾತ್ರಿಕ ತನ್ನ ಪ್ರವಾಸ ಕಥನದಲ್ಲಿ ವಿಶೇಷವಾಗಿ ಬರೆದುಕೊಂಡಿದ್ದಾನೆ. ಗೋವಿನಿಂದ ಹಿಡಿದು ಸಮಸ್ತ ಪ್ರಾಣಿಗಳ ಹತ್ಯೆ ತಡೆದಾಗ ಮಾತ್ರ ಮಾನವ ಸಮಾಜದ ಉನ್ನತಿ ಸಾಧ್ಯ ಎನ್ನುವುದನ್ನು ನಮ್ಮ ದೇಶದ ಅತ್ಯಂತ ಯಶಸ್ವಿ ರಾಜರಲ್ಲಿ ಒಬ್ಬರಾದ ಹರ್ಷವರ್ಧನ ಹೇಳುತ್ತಾನೆ ಮಾತ್ರವಲ್ಲ ತನ್ನ ವ್ಯಾಪ್ತಿಯಲ್ಲಿ ಈ ಕುರಿತು ಕ್ರಮಕೂಡ ಕೈಗೊಂಡಿದ್ದ ಎನ್ನುವುದನ್ನು ನಮ್ಮ ಇತಿಹಾಸ ಹೇಳುತ್ತದೆ. ಹೈದರಾಲಿಯ ಆಡಳಿತ ಕಾಲದಲ್ಲಿ ಗೋಹತ್ಯೆ ಮಾಡುವವರ ಕೈಗಳನ್ನು ಕತ್ತರಿಸಬೇಕೆಂದು ಫರ್ಮಾನು (ಆಜ್ಞೆ) ಹೊರಡಿಸಿದ್ದ ಎನ್ನುವುದನ್ನು ಭಾರತದ ಸರ್ವೋಚ್ಚ ನ್ಯಾಯಾಲಯ 1958ರ ತನ್ನ ತೀರ್ಪೊಂದರಲ್ಲಿ ಉಲ್ಲೇಖಿಸಿದೆ.

ಭಾರತದ ಸಂವಿಧಾನದ 48ನೇ ವಿಧಿಯ ಪ್ರಕಾರ 'ಭಾರತದಲ್ಲಿ ಗೋಹತ್ಯೆ ಸಂಪೂರ್ಣ ನಿಲ್ಲಬೇಕು ಮಾತ್ರವಲ್ಲ ಈ ಕುರಿತು ಆಯಾಯ ರಾಜ್ಯಗಳು ಗಮನಹರಿಸಿ, ತಳಿ ಸಂವರ್ಧನೆ ಮಾಡುವ ಕಡೆ ಕೂಡ ಯೋಚಿಸಬೇಕು ಎಂದು ಹೇಳಿದೆ'. ಸರ್ವೋಚ್ಚ ನ್ಯಾಯಾಲಯದ 2001ರ ತೀರ್ಪಿನಲ್ಲಿ ಗೋಹತ್ಯೆ ತಡೆಯುವ ಕುರಿತು ಸಮಸ್ತ ಸಮಾಜ ಗಮನ ನಿಷೇಧ



ಕಾನೂನು ಜಾರಿಯಲ್ಲಿತ್ತು. ಆದರೆ ಕೊಡಗು ಕರ್ನಾಟಕದಲ್ಲಿ (ಆಗಿನ ಮೈಸೂರು ರಾಜ್ಯ) ವಿಲೀನಗೊಂಡಾಗ ಆ ಕಾನೂನು ಕೂಡ ಅದರೊಂದಿಗೆ ವಿಲೀನವಾಯಿತು. 1964ರಲ್ಲಿ ಕರ್ನಾಟಕದಲ್ಲಿ 'ಗೋಹತ್ಯೆ ಮತ್ತು ದನಕರುಗಳ ಸಂರಕ್ಷಣ ಕಾಯಿದೆ' (ಹಿಂದಿನ ಮೈಸೂರು ರಾಜ್ಯದ ಗೋಹತ್ಯೆ ನಿಷೇಧ ಕಾನೂನು 1948) ಹೆಸರಲ್ಲಿ ಕಾನೂನು ಜಾರಿಗೊಳಿಸಿದೆ. ಆ ಕಾನೂನಿನ ಪ್ರಕಾರ ಗೋಹತ್ಯೆ ನಿಷೇಧ ಮಾತ್ರವಲ್ಲ, ಹತ್ಯೆಗಾಗಿ ಸಾಗಾಟ ಮಾಡುವುದು ಮತ್ತು ಅದಕ್ಕೆ ಸಹಾಯ ನೀಡುವುದೂ ಅಪರಾಧ ಎಂದಿದೆ.

ಇಂದು ಅಂಕಿಸಂಖ್ಯೆಗಳನ್ನು ಗಮನಿಸಿದಾಗ ಕೇವಲ ವಿದೇಶಗಳಲ್ಲಿ ಮಾತ್ರವಲ್ಲ ಸ್ವಾತಂತ್ರ್ಯ ನಂತರ 1947 ಭಾರತದಲ್ಲಿಯೂ ಗೋಹತ್ಯೆ ಜಾಸ್ತಿಯಾಗಿದೆ ಎನ್ನುವುದು

(6ನೆ ಪುಟ ನೋಡಿ)

# ಹೀಗೊಂದು ಹಾಲಿನ ಸ್ವಗತ

ಪುಟಾಣಿ ಮಕ್ಕಳಿಂದ ಹಿಡಿದು ಅಜ್ಜ–ಅಜ್ಜಿಯರವರೆಗೆ ಎಲ್ಲರಿಗೂ ನಾನೆಂದರೆ ತುಂಬಾ ಇಷ್ಟ. ನನ್ನ ರುಚಿ, ಸ್ವಾದ ಎಲ್ಲವನ್ನೂ ಎಲ್ಲರೂ ಮೆಚ್ಚುತ್ತಾರೆ. ಪರಿಶುದ್ಧ ಮನದವರಿಂದ ಅನವರತ ಪೂಜಿಸಲ್ಪಡುವ ಪವಿತ್ರ ಗೋವಾತೆಯಿಂದ ಕೊಡಲ್ಪಡುವ ಒಂದು ಅತ್ಯುತ್ತಮ ಉತ್ಪನ್ನವಾಗಿದ್ದೇನೆಂಬ ಖುಷಿ ನನಗೆ. ಪೂರ್ಣ ಪೌಷ್ಟಿಕಾಂಶಯುಕ್ತವಾಗಿ ಒಳ್ಳೆ ಆರೋಗ್ಯವನ್ನೊದಗಿಸುವ ಕೆಲಸ ನನ್ನದು. ಬನ್ನಿ, ನನ್ನೊಳಗಿರುವ, ನಿಮಗುಪಕಾರಿಯಾದ ಅಂಶಗಳನ್ನು ಸ್ವಲ್ಪ ಹೇಳುತ್ತೇನೆ ಕೇಳಿ.

ಭುವಿಯ ಮೇಲೆ ದೊರಕುವ ಅಮೃತವಂತೆ ನಾನು. ಇದು ಬರೀ ಹೊಗಳಿಕೆಯ ಮಾತಲ್ಲ. ಸಾಧಾರಿತವಾಗಿ ಪ್ರಮಾಣೀಕರಿಸಲ್ಪಟ್ಟ ನಿತ್ಯಸತ್ಯ. ಏನಿರಬಹುದು ಅಂಥದ್ದು ನನ್ನಲ್ಲಿ ಅಂತ ತಿಳಿದುಕೊಳ್ಳುವ ಕುತೂಹಲ ಇದೆಯಾ? ಈ ಕೆಳಗಿನ ಅಂಶಗಳತ್ತ ಕಣ್ಣುಹಾಯಿಸಿ:

ನನ್ನಲ್ಲಿರುವ ಅಮೈನೋ ಆಮ್ಲಗಳು, ಪ್ರೋಟೀನ್‌ಗಳು ಸುಲಭವಾಗಿ ಜೀರ್ಣವಾಗುವಂತೆ ಮಾಡುತ್ತವೆ ಮತ್ತು ಇವು ಕಿಡ್ನಿಯ ಆರೋಗ್ಯಕ್ಕೆ ಬಹಳ ಒಳ್ಳೆಯದಂತೆ.



ನಿಮ್ಮ ದೇಹರಕ್ಷಣೆಗೆ ಅಗತ್ಯವಾದ ವಿಟಮಿನ್ A, B2, B3 ಇವುಗಳ ಆಗರ ನಾನು.

ಇಂದಿನ ನಿಮ್ಮ ಸಾಮಾನ್ಯ ಆರೋಗ್ಯ ಸಮಸ್ಯೆಯಾಗಿರುವ ಆಮ್ಲೀಯತೆ (acidity) ಯನ್ನು ಕಡಿಮೆ ಮಾಡುವುದಷ್ಟೇ ಅಲ್ಲದೆ ಪೆಪ್ಟಿಕ್ ಹುಣ್ಣನ್ನೂ ಗುಣಗೊಳಿಸುತ್ತೇನೆ.

ಇನ್ನಿತರ ಪ್ರಮುಖ ಆರೋಗ್ಯ ಸಮಸ್ಯೆಗಳಾದ ಕೊಲೊನ್ (colon), ಚರ್ಮ ಹಾಗೂ ಸ್ತನ ಕ್ಯಾನ್ಸರ್‌ಗಳನ್ನೂ ಕಡಿಮೆಮಾಡುವ ಶಕ್ತಿ ಇದೆ.

ನಿಮ್ಮ ದೇಹದಲ್ಲಿ ಕೊಲೆಸ್ಟರಾಲ್ ಸಂಗಹವಾಗುವುದನ್ನು ತಡೆಯುತ್ತೇನೆ.

ನಾನೊಬ್ಬ ಅತ್ಯುತ್ತಮ ಪ್ರಾಕೃತಿಕವಾಗಿ ದೊರಕುವ ವಿಷವಿರೋಧಿ (anti-oxidant)

ಆರೋಗ್ಯಯುತ ಮನಸ್ಸಿನ ಬೆಳವಣಿಗೆಗೆ ಪೂರಕವಾದ ಪೊಟ್ಯಾಶಿಯಂನ್ನು ಒಳಗೊಂಡಿದ್ದೇನೆ.

ಮಧುಮೇಹವನ್ನು ನಿವಾರಿಸುವ ಮೂಲಕ ಮಧುಮೇಹಿಗಳಿಗೆ ಸಕ್ಕರೆಯಾಗಿದ್ದೇನೆ.

ಎಲ್ಲಾ ವಯಸ್ಸಿನವರಿಗೂ ಸಮೃದ್ಧ ಆಹಾರ.

ತಾಯಿಯ ಹಾಲಿನ ಬಳಿಕ ಮಗುವಿಗೆ ನಾನೇ ಉತ್ತಮ ಆಹಾರ.

ನನ್ನಲ್ಲಿರುವ ಕಡಿಮೆ ಕೊಬ್ಬಿನಂಶ ನಿಮ್ಮ ದೇಹವನ್ನು ಫಿಟ್ ಆಗಿಡುವುದಲ್ಲದೆ ಬೊಜ್ಜು ಬೆಳೆಯದಂತೆಯೂ ಕಾಪಾಡುತ್ತದೆ.

ನನ್ನಲ್ಲಿ ಲಭ್ಯವಿರುವ ಕ್ಯಾಲ್ಸಿಯಮ್ ಮತ್ತು ಪಾಸ್ಫೊರಸ್ ನಿಮ್ಮ ದೇಹಕ್ಕೆ ಪೋಷಕಾಂಶಗಳನ್ನು ಸರಿಯಾದ ಪ್ರಮಾಣದಲ್ಲಿ ಹೀರಿಕೊಳ್ಳಲು ಸಹಾಯ ಮಾಡುತ್ತದೆ. ಮುಖ್ಯವಾಗಿ ಮಕ್ಕಳ ಬೆಳವಣಿಗೆಗೆ ಇದು ಪೂರಕ.

ಇನ್ನೊಂದು ಗಮನಿಸಬೇಕಾದ ಅಂಶ ಅಂದರೆ ಸಾಮಾನ್ಯವಾಗಿ ಸಸ್ಯಾಹಾರಿಗಳಿಗೆ ದೊರಕದ ವಿಟಮಿನ್ B12 ನನ್ನಲ್ಲಿದೆ. ದೃಷ್ಟಿಯ ಆರೋಗ್ಯಕ್ಕೆ ಬೇಕಾದ ಕೆರೋಟಿನ್ ಹೇರಳವಾಗಿದೆ. ನನ್ನಲ್ಲಿರುವ ಫೋಲಿಕ್ ಆಮ್ಲ ಸಣ್ಣ ಮಕ್ಕಳಲ್ಲಿ ಅನೀಮಿಯಾವನ್ನು ತಡೆಯುತ್ತದೆ. ಸಣ್ಣಮಗುವಿನಲ್ಲಿ ಕಂಡುಬರುವ ವಿವಿಧ ರಕ್ತಸ್ರಾವೀಯ ರೋಗಗಳನ್ನು ತಡೆಯುವ ಸಾಮರ್ಥ್ಯವಿರುವ ವಿಟಮಿನ್ ಕೆ ಕೂಡಾ ನನ್ನಲ್ಲಿದೆ!

ನನ್ನಲ್ಲಿರುವ ಮುಖ್ಯ ಸಕ್ಕರೆಯಂಶ ಲ್ಯಾಕ್ಟೋಸ್. ಇದು ನೀವು ನಿತ್ಯ ಬಳಸುವ ಸಕ್ಕರೆಗಿಂತ ಸ್ವಲ್ಪ ಕಡಿಮೆ ಸಿಹಿಯುಳ್ಳದ್ದಂತೆ. ದೇಹಕ್ಕೆ ಕ್ಯಾಲ್ಸಿಯಮ್ ಮತ್ತು ಪಾಸ್ಫೊರಸ್ ಅಂಶಗಳನ್ನು ಹೀರಿಕೊಳ್ಳುವಲ್ಲಿ ಈ ಲ್ಯಾಕ್ಟೋಸ್ ಪ್ರಮುಖ ಪಾತ್ರ ವಹಿಸುತ್ತದೆ ಹಾಗೂ ಕೆಲವು ಸಂಕೀರ್ಣ ಬಿ ವಿಟಮಿನ್‌ಗಳನ್ನು ಕರುಳಲ್ಲಿ ಸಮನ್ವಯಗೊಳಿಸಲೂ ಸಹಕಾರಿಯಾಗಿದೆ.

ಇನ್ನು ನನ್ನಲ್ಲಿರುವ ಪ್ರಮುಖ ಖನಿಜಾಂಶಗಳೆಂದರೆ ಕ್ಯಾಲ್ಸಿಯಮ್, ಪಾಸ್ಫರಸ್, ಸೋಡಿಯಮ್ ಮತ್ತು ಪೊಟ್ಯಾಶಿಯಂ. ಮೇದೋಜೀರಕ ಗ್ರಂಥಿಗಳಲ್ಲಿ ಇನ್‌ಸುಲಿನ್ ಅನ್ನು ಸಮನ್ವಯಗೊಳಿಸಲು ಅಗತ್ಯವಿರುವ ಜಿಂಕ್‌ನ ಆಗರವಂತೆ ನಾನು. ದೇಹರಕ್ಷಣೆಯ ಕೆಲಸದಲ್ಲೂ ಇದು ಸಹಾಯಕ. ನನ್ನಲ್ಲಿ ಮತ್ತು ನನ್ನ ಉಪ ಉತ್ಪನ್ನಗಳಲ್ಲಿ ಪ್ರಮುಖವಾಗಿ ಕಂಡುಬರುವುದು ಕ್ಯಾಲ್ಸಿಯಂ. ಇದು ಮೂಳೆಗಳ ಬೆಳವಣಿಗೆಗೆ ಹಾಗೂ ಆರೋಗ್ಯಕ್ಕೆ ಸಹಕಾರಿಯೆಂಬುದು ನಿಮಗೆಲ್ಲ ತಿಳಿದಿರುವ ವಿಚಾರ. ಅಷ್ಟೇ ಅಲ್ಲದೆ, ನಾವು ಅಸ್ಥಿರಂಧ್ರತೆಯ ಅಪಾಯವನ್ನೂ ಕಡಿಮೆ ಮಾಡುತ್ತೇವೆಂಬುದು ಅಧ್ಯಯನಗಳ ಮೂಲಕ ಕಂಡುಬಂದಿದೆಯಂತೆ.

ನನ್ನಲ್ಲಿ 85 ಶೇಕಡಾ ನೀರಿನಂಶವಿದೆ. ಹಾಗಾಗಿ ನಾನು ದ್ರವ ಹಾಗೂ ಘನ ಆಹಾರಗಳೆರಡರ ಕೆಲಸವನ್ನೂ ಮಾಡಿದಂಥ ಸಂತೃಪ್ತಿ ನನಗೆ.

ನನ್ನ ಬದಲಾಗಿ, ನನಗೆ ಸರಿಸಾಟಿಯಾಗಿ, ನನ್ನಷ್ಟು ಸುಲಭವಾಗಿ ಸಿಗುವ ಆಹಾರ ಇನ್ನೊಂದಿಲ್ಲವೆಂಬ ಹೆಗ್ಗಳಿಕೆ. ಸಣ್ಣ ಮಕ್ಕಳಿಗೆ, ಬೆಳೆಯುತ್ತಿರುವವರಿಗೆ, ವಯಸ್ಕರಿಗೆ, ಗರ್ಭಿಣಿಯರಿಗೆ, ಬಾಣಂತಿಯರಿಗೆ ಅಗತ್ಯವಾದ ಅನೇಕಾನೇಕ ಪೋಷಕಾಂಶಗಳನ್ನು ನೀಡುವುದರ ಮೂಲಕ ಎಲ್ಲರ ಆರೋಗ್ಯ ರಕ್ಷಣೆಯಲ್ಲೂ ಪ್ರಮುಖ ಪಾತ್ರ ವಹಿಸುವೆ. ಏನಿದ್ದರೂ ಇದಕ್ಕೆಲ್ಲ ಮೂಲ ಆ ಗೋಮಾತೆ. ಅವಳಿಂದ ಕೊಡಲ್ಪಟ್ಟು ಮನುಕುಲಕ್ಕೆ ಅತ್ಯುಪಕಾರಿಯಾಗುವ ಧನ್ಯತೆ ನನ್ನದು.

ಇವಿಷ್ಟು ನನ್ನ ಬಗೆಗೆ ಮೇಲ್ನೋಟಕ್ಕೆ ಹೇಳಬಹುದಾದ ಅಂಶಗಳು. ಸವಿಸ್ತಾರವಾಗಿ ಹೇಳುತ್ತಾ ಹೊರಟರೆ ಇನ್ನಷ್ಟು ವಿಷಯಗಳಿವೆ. ಪುಟ್ಟ ಮಗುವೊಂದು ಕರೆಯುತ್ತಿದೆ. ಇನ್ನೊಮ್ಮೆ ಬಂದು ಹೇಳುತ್ತೇನೆ. ನಮಸ್ಕಾರ.

**– ಅನುಶ್ರೀ ಎಲ್.**

---

(4ನೆ ಪುಟದಿಂದ)

## ಗೋವು–ಕಾನೂನು–ನಮಗೆಷ್ಟು ಗೊತ್ತು?

ನಿಸ್ಸಂಶಯ. ಪಶುಸಂಗೋಪನಾ ಇಲಾಖೆ ಪ್ರಕಾರ 1951 ರಿಂದ ನಮ್ಮ ದೇಶದಲ್ಲಿ ಪ್ರತೀ ಒಂದು ಸಾವಿರ ಜನರಿಗೆ ಗೋವಿನ ಸಂಖ್ಯೆಯ ಅನುಪಾತ ಯಾವ ರೀತಿ ಕುಸಿಯುತ್ತ ಬಂದಿದೆ ಎನ್ನುವುದನ್ನು ಕೆಳಗಿನ ಕೋಷ್ಟಕ ತೋರಿಸಿಕೊಡುತ್ತದೆ.

ವರ್ಷ ಮತ್ತು ಗೋವುಗಳ ಸಂಖ್ಯೆ (ಪ್ರತಿ 1000 ಮಂದಿಗೆ) 1951–430 1961–400 1971–326 1981–278 1991–202 2001–110

ಅಂದರೆ 2011ರಲ್ಲಿ ಪ್ರತೀ ಸಾವಿರ ಮಂದಿಗೆ ಕೇವಲ 20 ಗೋವುಗಳು ಎಂದಾದಲ್ಲಿ ಪ್ರತೀ ವ್ಯಕ್ತಿಗೆ? ಯೋಚಿಸಿ.

ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ ಇಂದು ಗೋಸಂರಕ್ಷಣೆ, ಸಂವರ್ಧನೆ ಮತ್ತು ಗೋಹತ್ಯಾ ನಿಷೇಧ ಕುರಿತಂತೆ ದೇಶದಾದ್ಯಂತ ಏಕರೂಪದ ಕಾನೂನು ಜಾರಿಗೊಳಿಸಲು ಸಕಾಲ. ಇದೇ ಸಂದರ್ಭದಲ್ಲಿ ಕಾನೂನುಗಳನ್ನು ಸರಿಯಾಗಿ ಬಳಸಿಕೊಳ್ಳುವ ಕುರಿತು ಗ್ರಾಮಗ್ರಾಮಗಳಲ್ಲಿ ಹೈನುಗಾರ/ಕೃಷಿಕರಿಗೆ ಮಾಹಿತಿ ನೀಡಬೇಕಿದೆ. ಹಾಗಾದಾಗ ಗೋ ಗ್ರಾಮದಿಂದ ವಿಶ್ವಮಂಗಲದ ಕನಸು ಕಾಣುತ್ತಿರುವ ಆ ಮಹಾನ್ ಯತಿಗಳ ಆಶಯ ಖಂಡಿತವಾಗಿಯೂ ಸಾಕಾರಗೊಳ್ಳುತ್ತದೆ.

**– ಸದಾಶಿವ ಮೊಂತಿಮಾರು**

---

(3ನೆ ಪುಟದಿಂದ)

## ಮಾಸದ ಗೋವು – ಬರಗೂರು

ಬರಗೂರು ತಳಿಯ ಹಸು ಹೋರಿಗಳ ಬಣ್ಣ ಬೂದು ಬಣ್ಣ. ಅದರ ಮೇಲೆ ಸೋಕಿದಂತೆ ಬಿಳಿಯ ಪಟ್ಟೆಗಳು. ಕೆಲವು ಬಿಳಿ, ಕಪ್ಪು ದನಗಳೂ ಕಾಣಸಿಗುವುದಿದೆ. ಅಂಬ್ಲಾಚೆರಿಯಂತೆಯೋ, ಕಂಗಾಯಾಮ್‌ನಂತೆಯೊ ಇವುಗಳ ಬಣ್ಣ ವಯಸ್ಸಾದಂತೆ ಬದಲಾಗುವುದಿಲ್ಲ. ಧೃಡಶರೀರಿಗಳಾದ ಬರಗೂರು ಹೋರಿಗಳು ನೊಡುವುದಕ್ಕೆ ಸ್ವಲ್ಪ ಮಲೆನಾಡು ಗಿಡ್ಡದಂತೆಯೆ ಕಂಡರೂ ಬರಗೂರು ಹಸುಗಳ ಹತ್ತಿರ ಜಾತಿಯ ಹಸು ನಿಮಾರಿ. 100ರಿಂದ 150 ಸೆಂಟಿಮೀಟರ್ ಸಾಮನ್ಯವಾಗಿ ಹಸುಗಳು ಬೆಳದರೆ 170ರಿಂದ 200ರರವರೆಗೂ ಹೋರಿಗಳು ಬೆಳೆಯುತ್ತವೆ. ಉದ್ದನೆಯ ಕೊಂಬು (ಅಜಮಾಸು 30 ಸೆ.ಮಿ), ಸಣ್ಣ ಡುಬ್ಬ, ಮುಂಚಾಚಿಕೊಂಡ ಹಣೆ, 295 ಕೇಜಿಯಿಂದ 340ಕೇಜಿಯವರೆಗೆ ತೂಕ ಇವುಗಳು ಇತರ ಮಾಹಿತಿಗಳು.

ರಂಗುರಂಗಿನ ಥಳಕುಬೆಳಕಿನ ಜಗತ್ತಿಗೆ ಮರುಳಾಗಿ ಬರಗೂರ್ ತಳಿಯ ಪಾರಂಪರಿಕ ಪಾಲಕರು ಪಾಟ್ಟಿಯನ್ನು ಬಿಟ್ಟು ಪೇಟೆ ಸೇರುತ್ತಿದ್ದರೆ ಬರಗೂರು ತಳಿ ಸಂಖ್ಯೆಯಲ್ಲಿ ಸೊರಗುತ್ತಿದೆ. ಮುಂದೆ?

**– ಮಧುಕೇಶ ದೊಡ್ಡೇರಿ**

---

## ಸಂಪಾದಕರ ನುಡಿ

ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ 27, 2007ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ–ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು 21ನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ–ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com